# ಯುಗಾದಿ - ವರ್ಷಾದಿ

ಹಳೆಯ ವರ್ಷ ಕಳೆದು ಹೊಸ ವರ್ಷ ಬರುತ್ತದೆ. ಕೆಲವರಿಗೆ ಮೇಷ ಮಾಸದ ಮೊದಲ ದಿನದಂದು; ಕೆಲವರಿಗೆ ಚೈತ್ರ ಶುದ್ಧ ಪ್ರತಿಪದೆಯಂದು; ಕೆಲವರಿಗೆ ಜನವರಿ ತಿಂಗಳ ಮೊದಲ ತೇದಿಯಂದು.

ಪಶ್ಚಿಮದವರು 'ನ್ಯೂ ಇಯರ್ ಡೇ' ಅಂತಾರೆ. ಅರ್ಥ ಆಗುತ್ತದೆ. ಆದರೆ ಪೌರ್ವಾತ್ಯದವರು, ಅರ್ಥಾತ್ ಭಾರತೀಯರು 'ಯುಗಾದಿ' ಅಂತಾರೆ! ಇರುವುದೇ ನಾಲ್ಕು ಯುಗಗಳು: ಕೃತ, ತ್ರೇತಾ, ದ್ವಾಪರ ಮತ್ತು ಕಲಿ. ಸದ್ಯ ಕಲಿಯುಗ ಮುಂದುವರಿಯುತ್ತದೆ ಎನ್ನುತ್ತಾರೆ ಪಂಚಾಂಗದ ಜ್ಯೋತಿಷಿಗಳು? ಮತ್ತೆ ಯಾವ ಯುಗದ ಆದಿ? ಮತ್ತೆ ಯಾವುದು ಪ್ರತಿ-ವರುಷವೂ ಬರುವ ಹೊಸ ಯುಗಾದಿ?

ಹಿಂದಿನವರು ಭಾಷೆಯನ್ನು ಬಳಸುತ್ತಿದ್ದ ರೀತಿಯೇ ಚಂದ. ತಮ್ಮ ಸಂಸ್ಕೃತಿಯ ಇತಿಹಾಸವನ್ನು, ತಮ್ಮ ಬದುಕಿನ ನಂಬಿಕೆಗಳನ್ನು ಅವರು ಶಬ್ದಗಳಲ್ಲಿ ತುಂಬಿ ನಮಗೆ ಕೊಟ್ಟರು. ಯುಗಾದಿ ಅಂಥ ಒಂದು ಅರ್ಥವತ್ತಾದ ಶಬ್ದ.

ಯುಗ ಎಂದರೆ ಜೋಡಿ; ಯುಗ್ಮ. ಬದುಕೇ ಒಂದು ಯುಗ. ಸುಖ-ದುಃಖಗಳ ಜೋಡಿ; ಲಾಭ-ನಷ್ಟಗಳ ಜೋಡಿ; ಸೋಲು-ಗೆಲುವುಗಳ ಜೋಡಿ; ಹಗಲು-ಇರುಳುಗಳ ಜೋಡಿ; ಹುಟ್ಟು-ಸಾವುಗಳ ಜೋಡಿ. ಇದೆಲ್ಲವನ್ನೂ ಅನುಭವಿಸಬೇಕಾದ್ದು ಹೆಣ್ಣು-ಗಂಡಿನ ಜೋಡಿ.

ಈ ಜೋಡಿಯ ಜೋಡಿಯೇ ಬದುಕು. ಹಳೆಯ ಜೋಡಿಯನ್ನು ನೆನೆದು ಹೊಸ ಜೋಡಿಗೆ ನಾಂದಿ ಹಾಡುವುದೇ ಯುಗಾದಿ. ಇದನ್ನು ನೆನಪಿಸಲಿಕ್ಕಾಗಿಯೇ ಬೇವು-ಬೆಲ್ಲಗಳ ಜೋಡಿ; ಕಹಿ-ಸಿಹಿ ಜೋಡಿ.

— ಬನ್ನಂಜೆ ಗೋವಿಂದಾಚಾರ್ಯ